<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಮಳವಳ್ಳಿ.</u>

<u>ಸಿಸಿ ನಂಃ **20/2022**</u>

| | | |
|---|---|---|
| ಹೆಸರು | ಮದನ್ ದಾಸ್ | ಸಿ.ಡಬ್ಲ್ಯೂ - **11** |
| ತಂದೆಯ ಹೆಸರು | ಮೋಹನ್ ದಾಸ್ | ಪಿ.ಡಬ್ಲ್ಯೂ - **9** |
| ವಯಸ್ಸು | 68 ವರ್ಷ | |
| ಉದ್ಯೋಗ | ಚಿನ್ನದ ಅಂಗಡಿಯಲ್ಲಿ ಕೆಲಸ | |
| ವಾಸ ಸ್ಥಳ | ಮಳವಳ್ಳಿ | |

ಸಾಕ್ಷಿಗೆ ದಿನಾಂಕಃ 25.05.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಎ ಪಿ ಪಿ ರರಿಂದ ಃ</u>

ಸುಮಾರು 2021 ನೇ ಇಸವಿಯಲ್ಲಿ ಮಳವಳ್ಳಿ ಗ್ರಾಮಾಂತರ ಪೊಲೀಸರು ನನ್ನನ್ನು ಚಿನ್ನವನ್ನು ತೂಕ ಮಾಡುವ ಉದ್ದೇಶದಿಂದ ಪೊಲೀಸ್ ಠಾಣೆಗೆ ಕರೆಯಿಸಿದ್ದರು. ನಾನು ಕತ್ತಿನ ಚೈನ್‌ನ್ನು ತೂಕ ಮಾಡಿದ್ದು, ಅದು 27.5 ಗ್ರಾಂ. ತೂಕಹೊಂದಿದ್ದು, 27 ಇಂಚು ಉದ್ದ ಹೊಂದಿತ್ತು. ಸದರಿ ಚೈನ್‌ನ್ನು ಗಣೇಶ್ ಜುವೆಲರ್ಸ್ ಗೆ ಮಾರಾಟ ಮಾಡಿದ್ದು, ಅಲ್ಲಿಂದ ಪೊಲೀಸರು ಸದರಿ ಚೈನ್‌ನ್ನು ಅಮಾನತ್ತು ಪಡಿಸಿಕೊಂಡಿದ್ದರು. ಹೊಂಬೇಗೌಡನ ದೊಡ್ಡಿ ಗ್ರಾಮದ ಅಂದಾನಿ ಗೌಡ ರವರ ಮಗಳ ಮದುವೆ ಮದನ ಮೋಹನ ಕಲ್ಯಾಣ ಮಂಟಪದಲ್ಲಿ ಇದ್ದು, ಅಲ್ಲಿ ಕಳ್ಳತನ ಆಗಿರುತ್ತದೆ. ನಾನು ಈ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

ಎಪಿಪಿ ಯವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.

<u>ಪಾಟೀ ಸವಾಲುಃ ಎ ಪಿ ಪಿ ರವರಿಂದ ಃ</u>

ದಿ: 04.03.2021 ರಂದು ಮತ್ತು 05.03.2021 ರಂದು ಮದನ್ ಮೋಹನ ಕಲ್ಯಾಣ ಮಂಟಪದಲ್ಲಿ ಆರೋಪಿತರು ಚಿನ್ನದಚೈನ್‌ನ್ನು ಕಳ್ಳತನ ಮಾಡಿ, ರಾಮನಗರದ ಗಣೇಶ್ ಜುವೆಲರ್ಸ್‌ನಲ್ಲಿ ಮಾರಾಟ ಮಾಡಿದ್ದು, ಅದನ್ನು ಪೊಲೀಸರು ವಶ ಪಡಿಸಿಕೊಂಡು ಪೊಲೀಸ್ ಠಾಣೆಯಲ್ಲಿ ನನ್ನ, ಚಾಸಾ 4 ಮತ್ತು 5 ಹಾಗೂ ಚಾಸಾ 1 ರವರ ಸಮಕ್ಷಮ ಅಮಾನತ್ತು ಪಡಿಸಿಕೊಂಡು ನನ್ನ ಮೂಲಕ ತೂಕ ಮಾಡಿಸಿರುತ್ತಾರೆ ಎಂದರೆ ಸರಿ. ಸದರಿ ಕಾಲಕ್ಕೆ ಆರೋಪಿಗಳನ್ನು ನನಗೆ ಠಾಣೆಯಲ್ಲಿ ತೋರಿಸಿರುತ್ತಾರೆ ಎಂದರೆ ಆರೋಪಿಗಳನ್ನು ನನಗೆ ತೋರಿಸಿರುವುದಿಲ್ಲ. ಚಾಸಾ 1 ರವರ ಕತ್ತಿನಲ್ಲಿದ ಚಿನ್ನದ ಸರವನ್ನು ಆರೋಪಿಗಳು ಕಳ್ಳತನ ಮಾಡಿರುವುದು ನನಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಆ ದಿನ ತೂಕ ಮಾಡಿದ ಚಿನ್ನದ ಚೈನ್ ಈಗ ನೋಡುತ್ತಿರುವ ನಿಪಿ 2 ರಲ್ಲಿ ಕಾಣಿಸುತ್ತದೆ ಎಂದರೆ ಸರಿ.

ಪೊಲೀಸರು ಆರೋಪಿಗಳನ್ನು ನನಗೆ ತೋರಿಸಿದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಃಆರೋಪಿ ಪರ: ವಕೀಲರಿಂದ</u>

ಪಾಟೀ ಸವಾಲು ಇರುವುದಿಲ್ಲ.

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಮಳವಳ್ಳಿ.